# ಕರ್ನಾಟಕ ವಿಧಾನ ಪರಿಷತ್ತು

**<u>ಲಘು ಪ್ರಕಟಣೆ ಭಾಗ – 2</u>**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, ದಿನಾಂಕ:18ನೇ ಮಾರ್ಚ್ 2019**

**ಸಂಖ್ಯೆ: 10**

ರಾಷ್ಟ್ರದಲ್ಲಿ ಅತೀ ದೊಡ್ಡದಾದ ಹಾಗೂ ಪುಸ್ತಕ ಭಂಡಾರದ ಶ್ರೀಮಂತಿಕೆಯಿಂದ ಎರಡನೇ ಸ್ಥಾನವನ್ನು ಪಡೆದಿರುವ ಸಂಸತ್ತಿನ ಗ್ರಂಥಾಲಯದಲ್ಲಿ ಶಾಸಕಾಂಗದ ಅವಶ್ಯಕತೆಗಳಿಗೆ ವಿಶೇಷ ಮಹತ್ವ ಕೊಟ್ಟು ಸಂಸತ್ತಿನ ಮಾನ್ಯ ಸದಸ್ಯರುಗಳು ಹಾಗೂ ರಾಜ್ಯ ಸಭೆ ಮತ್ತು ಲೋಕಸಭೆ ಸಚಿವಾಲಯದ ಅಧಿಕಾರಿಗಳು ಅನೇಕ ಪುಸ್ತಕಗಳು/ ಪ್ರಕಟಣೆಗಳು/ ನಿಯತಕಾಲಿಕೆಗಳನ್ನು ಸಂಗ್ರಹಿಸುತ್ತಿದ್ದಾರೆ. ಗ್ರಂಥಾಲಯವು ಬಳಕೆದಾರರ ಸ್ನೇಹಿಯಾಗುವಂತೆ e-Journals, J-Gate informatics, e-Books and audio books ಎಂಬ ಹಲವು ವಿದ್ಯುನ್ಮಾನ ಸಂಪನ್ಮೂಲಗಳನ್ನು ಪರಿಚಯಿಸುವುದರ ಜೊತೆಗೆ. ದೃಷ್ಟಿಮಾಂದ್ಯ ವ್ಯಕ್ತಿಗಳಿಗೆ ಆಧುನೀಕೃತ ಸಲಕರಣೆಗಳೊಂದಿಗೆ ಬ್ರೈಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ ಹಾಗೂ NATIONAL DIGITAL LIBRARY OF INDIA ದ ಸಾಂಸ್ಥಿಕ ಸದಸ್ಯತ್ವವನ್ನು ಬಳಕೆದಾರರು ಪಡೆಯಬಹುದಾಗಿರುತ್ತದೆ ಮತ್ತು ಮೇಲೆ ವಿವರಿಸಿರುವ ಎಲ್ಲಾ ಸೌಲಭ್ಯಗಳನ್ನು ರಾಜ್ಯದ ವಿಧಾನಮಂಡಲ/ ಪರಿಷತ್ತಿನ ಸದಸ್ಯರುಗಳು ಸಂಸತ್ತಿನ ಗ್ರಂಥಾಲಯದ ಆವರಣದಲ್ಲಿ ತಮ್ಮ ಸಮಾಲೋಚನೆಗೆ ಪಡೆಯಬಹುದಾಗಿರುತ್ತದೆಯೆಂದು, ಈ ದಿಸೆಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಮಾನ್ಯ ಸದಸ್ಯರು http://parliamentlibraryindia.nic.in. ಅಂತರ್ಜಾಲ ತಾಣದಲ್ಲಿ ಲಭ್ಯವಿರುತ್ತದೆಂದು ಸಂಸತ್ತಿನ ಗ್ರಂಥಾಲಯದ ನಿರ್ದೇಶಕರು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಸೌಲಭ್ಯಗಳನ್ನು ಮಾನ್ಯ ಸದಸ್ಯರುಗಳು ಸದುಪಯೋಗಪಡಿಸಿಕೊಳ್ಳಲು ಸಂಸತ್ತಿನ ಗ್ರಂಥಾಲಯದಲ್ಲಿ ಲಭ್ಯವಿರುವ ವಿದ್ಯುನ್ಮಾನ ಸಂಪನ್ಮೂಲಗಳ/ಸೌಲಭ್ಯಗಳ ಮಾಹಿತಿಗಳನ್ನು ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳ ಗಮನಕ್ಕೆ ಈ ಮೂಲಕ ತರಲಾಗಿದೆ.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ(ಪ್ರ)**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**